655(19) ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ರಾಜ್ಯಮಟ್ಟದ ಸಹಕಾರಿ ಸಂಘಗಳು ಯಾವುವು;

ಆ) ಈ ಸಂಘಗಳು ಕಳೆದ ಮೂರು ವರ್ಷಗಳಲ್ಲಿ ಗಳಿಸಿದ ಲಾಭ ಅಥವಾ ಹಾನಿ ಎಷ್ಟು;

ಇ) ಈ ಸಂಘಗಳು 31–3–2004ಕ್ಕೆ ಗಳಿಸಿದ ಒಟ್ಟು ಲಾಭ ಅಥವಾ ಹಾನಿ ಎಷ್ಟು;

ಈ) ಈ ಸಂಘಗಳಿಗೆ ಸರ್ಕಾರ ಕೊಟ್ಟಿರುವ ಧನ ಸಹಾಯ 31–3–2004ಕ್ಕೆ ಎಷ್ಟು?

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು)

ಅ) ರಾಜ್ಯದಲ್ಲಿ 81 ರಾಜ್ಯಮಟ್ಟದ ಸಹಕಾರಿ ಸಂಘಗಳು ಇರುತ್ತದೆ. ಪಟ್ಟಿಯನ್ನು ಲಗತ್ತಿಸಿದೆ.

ಆ) ಈ ಸಂಘಗಳು ಕಳೆದ ಮೂರು ವರ್ಷಗಳಲ್ಲಿ ಗಳಿಸಿದ ಲಾಭ ಅಥವಾ ಹಾನಿ ಈ ಕೆಳಕಂಡಂತೆ ಇರುತ್ತದೆ.

(ರೂ. ಲಕ್ಷಗಳಲ್ಲಿ)

ವರ್ಷ	ಲಾಭ	ಹಾನಿ
2001–02	3974.61	2866.26
2002–03	820.31	7300.05
2003–04	1936.49	2320.03

ಇ) ಈ ಸಂಘಗಳು ದಿನಾಂಕ 31–3–2004ಕ್ಕೆ ಒಟ್ಟು ರೂ. 9759.51ಲಕ್ಷ ಲಾಭಗಳಿಸಿವೆ ಮತ್ತು ರೂ.679.73 ಲಕ್ಷಗಳ ಹಾನಿ ಅನುಭವಿಸಿದೆ.

ಈ) ಈ ಸಂಘಗಳಿಗೆ ಸರ್ಕಾರವು ದಿನಾಂಕ 31–3–2004ಕ್ಕೆ ರೂ. 3274.57 ಲಕ್ಷಗಳ ಧನಸಹಾಯ ನೀಡಿದೆ.

656(21) ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಜಿಲ್ಲಾವಾರು ಸ್ವಶಕ್ತಿ ಮಹಿಳಾ ಗುಂಪುಗಳ ಸಂಖ್ಯೆ ಎಷ್ಟು;

ಆ) ಪ್ರತಿ ಗುಂಪುಗಳಿಗೆ ಸರ್ಕಾರ ಕೊಟ್ಟಿರುವ ಸುತ್ತು ನಿಧಿ ಧನ ಸಹಾಯವೆಷ್ಟು;

ಇ) ಜಿಲ್ಲಾವಾರು ಈ ಸಂಘಗಳಲ್ಲಿ ಸಂಗ್ರಹಿಸಿರುವ ಮೊತ್ತವೆಷ್ಟು;

ಈ) ಜಿಲ್ಲಾವಾರು ಈ ಸಂಘಗಳ ಸದಸ್ಯರಿಗೆ ಹಾಗೂ ಇತರರಿಗೆ ಕೊಟ್ಟಿರುವ ಸಾಲದ ಮೊತ್ತವೆಷ್ಟು?

ಶ್ರೀಮತಿ ಭಾಗೀರಥಿ ಮರಳಸಿದ್ಧನಗೌಡ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು)